ಓ ಎಸ್ ನಂ.15/2023

ಪಿ.ಡಬ್ಲ್ಯೂ-1 ಭಾರತಿ ಗಂಡ ಮಲ್ಲಿಕಾರ್ಜುನ ಯಂಕಂಚಿ

**(ಇಂದು ದಿನಾಂಕಃ 17-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲು : ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ಈ ದಾವೆಯನ್ನು ನಮ್ಮ ತಂದೆಯ ಜಮೀನು ಬೇಕು ಎಂದು ಹಾಕಿರುತ್ತೇನೆ. ದಾವೆಯಲ್ಲಿ ಇಂಗ್ಲೀಷನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವೆಯಲ್ಲಿ ಬರೆದ ವಿಚಾರಗಳನ್ನು ಯಾರು ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನ ಸರ್ವೆ ನಂಬರ ೭೩ ಇದ್ದು, ಅದು ೨೩ ಎಕರೆ ೧೧ ಗುಂಟೆ ಜಮೀನು ಇರುತ್ತದೆ. ದಾವಾ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ಬಾಬುಕಣ್ಣೆರವರ ಜಮೀನು, ಪಶ್ಚಿಮಕ್ಕೆ ಭಗವಂತರಾಯರವರ ಜಮೀನು, ಉತ್ತರಕ್ಕೆ ಕೂಡಾ ಭಗವಂತರಾಯರವರ ಜಮೀನು ಇರುತ್ತದೆ ಮತ್ತು ದಕ್ಷಿಣಕ್ಕೆ ಲಕ್ಷ್ಮೀಬಾಯಿರವರ ಜಮೀನು ಇರುತ್ತದೆ. ನಮ್ಮ ತಂದೆ ೨೦೧೦ ರಲ್ಲಿ ಬೇರೆಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ೨ ಜನ ಹೆಂಡತಿಯರು ಎಂದರೆ ಸರಿ. ನನ್ನ ತಾಯಿಯ ಹೆಸರು ಸಿದ್ದಮ್ಮ ಆಗಿರುತ್ತದೆ. ನಮ್ಮ ತಂದೆಯ ಇನ್ನೊಬ್ಬ ಹೆಂಡತಿಯ ಹೆಸರು ಪಾರ್ವತಿ ಆಗಿರುತ್ತದೆ.

೨. ದಾವಾ ಜಮೀನಿನಲ್ಲಿ ೧೯ ಎಕರೆ ೬ ಗುಂಟೆ ಜಮೀನು ನಮ್ಮ ತಂದೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ೨೩ ಎಕರೆ ೧೧ ಗುಂಟೆ ಜಮೀನು ಬಂದಿದೆ ಎನ್ನುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳು ಸರಿ ಇರುತ್ತವೆ. ನಿಪಿ-೧೬ ರಲ್ಲಿ ಯಾರು ಯಾರಿಗೆ ಯಾವ ಜಮೀನು ಬಂದಿವೆ ಎಂದು ತೋರಿಸಲಾಗಿದೆ ಎಂದರೆ ಸರಿ. ವಾಟ್ನಿ ಪತ್ರದಲ್ಲಿ ತೋರಿಸಿದಂತೆ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ನಮ್ಮ ತಂದೆಯ ಪಾಲಿಗೆ ೨೩

ಎಕರೆ ೧೧ ಗುಂಟೆ ಜಮೀನು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯಾಧಿಕಾರಿಗಳ ಮುಂದೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ವಿಭಾಗಪತ್ರದಲ್ಲಿ ಬರೆದ ವಿಚಾರಗಳು ಸರಿಯಾಗಿ ಇರುವುದರಿಂದ ನಾನು ಸದರಿ ದಾಖಲೆಗಳನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಶಂಕರವರಿಗೆ ಭಗವಂತರಾಯ ಮತ್ತು ಸಾಯಿಬಣ್ಣ ಎಂಬ ಸಹೋದರರು ಇರುತ್ತಾರೆ ಎಂದರೆ ಸರಿ. ನಮ್ಮ ತಂದೆ ಮತ್ತು ಅವರ ಸಹೋದರರು ಎಷ್ಟು ವರ್ಷಗಳ ಹಿಂದೆ ಬೇರೆಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾರಿಗೆ ಯಾವ ಸರ್ವೆ ನಂಬರುಗಳ ಜಮೀನುಗಳು ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ.

೩. ನಮ್ಮ ಮನೆತನಕ್ಕೆ ಎಷ್ಟು ಜಮೀನುಗಳಿವೆ ಎಂದು ಗೊತ್ತಿಲ್ಲ. ನಮ್ಮ ತಂದೆಯ ಸಹೋದರರಿಗೆ ಯಾವ ಜಮೀನುಗಳು ಪಾಲಿಗೆ ಹೋಗಿವೆ ಎಂದು ನನಗೆ ಗೊತ್ತಿಲ್ಲ ನಮ್ಮ ತಂದೆಯ ಜಮೀನಿನ ಬಗ್ಗೆ ಮಾತ್ರ ನನಗೆ ಗೊತ್ತು ಎನ್ನುತ್ತಾರೆ. ನಮ್ಮ ತಂದೆಯ ಜಮೀನಿನ ಕುರಿತು ನಾನು ದಾವೆ ಹಾಕಿರುತ್ತೇನೆ. ನಿಮ್ಮ ತಂದೆಯ ಹೆಸರಿನಲ್ಲಿದ್ದ ಜಮೀನಿನ ಕುರಿತು ದಾವೆ ಹಾಕಿರುತ್ತಿರಾ ಎಂದರೆ ಸಾಕ್ಷಿಯು ೨೩ ಎಕರೆ ೧೧ ಗುಂಟೆ ಜಮೀನಿನ ಮೇಲೆ ದಾವೆ ಹಾಕಿರುತ್ತೇನೆ ಎನ್ನುತ್ತಾರೆ. ನನ್ನ ತಂದೆಯ ಸಹೋದರರಿಗೆ ಹೋದ ಜಮೀನು ಸಾಗುವಳಿಗೆ ಯೋಗ್ಯ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ ೭೨ ಮತ್ತು ೭೪ ರಲ್ಲಿ ಎಲ್ಲ ಜಮೀನು ಸಾಗುವಳಿ ಮಾಡಲು ಯೋಗ್ಯವಾಗಿರುತ್ತದೆ. ಸದರಿ ಜಮೀನು ಸಾಗುವಳಿಗೆ ಯೋಗ್ಯ ಇರದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.